

ಅ.2, 1993ರಂದು ಬೆಂಗಳೂರಿನ ವಿಧಾನಸೌಧದಲ್ಲಿ ನಡೆದ 'ದೇಸಿ ಬೀಜ ಸಮಾವೇಶ'ದಲ್ಲಿ ವಂದನಾ ಶಿವ ಅವರೊಂದಿಗೆ ರೈತರ ಸ್ವಾಭಿಮಾನವನ್ನು ಚಳವಳಿಯಾಗಿ ರೂಪಿಸಿದ ಎಂ.ಡಿ. ನಂಜುಂಡಸ್ವಾಮಿ (ಚಿತ್ರ: ಪ್ರಜಾವಾಣಿ ಆರ್ಕೈವ್ಸ್)





ಸ್ತ್ರೀಯರ ಹಕ್ಕಿನ ಪ್ರಶ್ನೆಗಳನ್ನು ಮುನ್ನೆಲೆಗೆ ತಂದ ಎಚ್.ವಿ. ಸಾವಿತ್ರಮ್ಮ, ಅನುಪಮಾ ನಿರಂಜನ

ದಶಕದಿಂದೀಚೆಗೆ ಕರ್ನಾಟಕದ ಹಲವು ತಲೆಮಾರುಗಳಿಗೆ ಕಮ್ಯುನಿಸ್ಟ್ ಚಳವಳಿಯ ಸತ್ವವನ್ನು ತಲುಪಿಸಿದೆ.

3

## ಹೋರಾಟದ ಕಥಾನಕ: ಬಿತ್ತಿ ಬೆಳೆದವರು

ಸ್ವಾತಂತ್ರ್ಯ ಚಳವಳಿಯ ಸಮಾಜಸುಧಾರಣೆಯ, ವ್ಯಕ್ತಿಪರಿವರ್ತನೆಯ ಆಶಯಗಳು 'ಕಾನೂರು ಹೆಗ್ಗಡಿತಿ', 'ಮಲೆಗಳಲ್ಲಿ ಮದುಮಗಳು', 'ಮರಳಿ ಮಣ್ಣಿಗೆ', 'ಮಾಡಿ ಮಡಿದವರು', 'ಗ್ರಾಮಾಯಣ' ಥರದ ಕೃತಿಗಳಲ್ಲಿ ಮೂಡಿ 'ಸ್ವಾತಂತ್ರ್ಯ'ದ ಅರ್ಥವೂ ವಿಸ್ತಾರಗೊಂಡಿತು. ಜೊತೆಗೆ, ವಿಭಿನ್ನ ಧಾರೆಗಳ ಲೇಖಕ, ಲೇಖಕಿಯರು ಹಲಬಗೆಯ ಸಮತಾ ಚಿಂತನೆಗಳ ಬೀಜಗಳನ್ನು ಕನ್ನಡ ನೆಲದಲ್ಲಿ ಬಿತ್ತಿ, ಬೆಳೆಸುತ್ತಾ ಬಂದರು. ಕಮ್ಯುನಿಸ್ಟ್ ಚಳವಳಿಯ ತೀವ್ರತೆ ಪ್ರಗತಿಶೀಲ ಘಟ್ಟದ ಕೃತಿಗಳನ್ನು ರೂಪಿಸಿದಂತೆ, ಮುಂದೆ ಎಂಬತ್ತರ ದಶಕದಲ್ಲಿ ವ್ಯಾಸರಾಯ ಬಲ್ಲಾಳರ 'ಬಂಡಾಯ'ದಂಥ ಕಾದಂಬರಿಯನ್ನೂ ರೂಪಿಸಿತು. ಎಪ್ಪತ್ತರ ದಶಕದ ಕೊನೆಗೆ ಅನಂತಮೂರ್ತಿಯವರ 'ಅವಸ್ಥೆ' ಕಾದಂಬರಿ ಕಾಗೋಡು ಚಳವಳಿ, ಸಮಾಜವಾದಿ ರಾಜಕಾರಣ ಮತ್ತು ಕಮ್ಯುನಿಸ್ಟ್ ರಾಜಕಾರಣವನ್ನು ಮತ್ತೆ ಪರಿಶೀಲಿಸಿತು. ಎಂಬತ್ತರ ದಶಕದಲ್ಲಿ ರೈತ ಚಳವಳಿಯಲ್ಲಿ ಪಾಲ್ಗೊಂಡಿದ್ದ ಕುಂದರನಾಡ ಪಾಟೀಲರ 'ಹಂತ' ಕಾದಂಬರಿ ರೈತ ಚಳವಳಿಯ ಮುಖ್ಯ ದಾಖಲೆಯಾಯಿತು. 2001ರಲ್ಲಿ ಪ್ರಕಟವಾದ ನಾ. ಡಿಸೋಜರ 'ಕೊಳಗ' ಗಣಪತಿಯಪ್ಪನವರನ್ನೇ ಕೇಂದ್ರ ಪಾತ್ರವಾಗಿಟ್ಟುಕೊಂಡು ಕಾಗೋಡು ಚಳವಳಿಯ ಅಧಿಕೃತ ಕಾದಂಬರೀಕರಣವಾಯಿತು. ಈ ದೃಷ್ಟಿಯಿಂದ ನೋಡಿದಾಗ ಚೋಮನದುಡಿ, ಚಿರಸ್ಮರಣೆ, ಅವಸ್ಥೆ, ಹಂತ, ಕೊಳಗ ಕಾದಂಬರಿಗಳ ನಡುವೆ ಕುತೂಹಲಕರವಾದ ಅಂತರ್ ಪಠ್ಯೀಯತೆ ಕಾಣತೊಡಗುತ್ತದೆ.

ಎಪ್ಪತ್ತರ ದಶಕದಲ್ಲಿ ಎಂ.ಡಿ. ನಂಜುಂಡಸ್ವಾಮಿ ರೂಪಿಸಿದ ಸಮಾಜವಾದಿ ಯುವಜನಸಭಾದ ಒಡನಾಟ ತೇಜಸ್ವಿ, ಲಂಕೇಶ್, ದೇವನೂರ ಮಹಾದೇವ, ಶ್ರೀಕೃಷ್ಣ ಆಲನಹಳ್ಳಿಯವರಂಥ ಮುಖ್ಯ ಲೇಖಕರನ್ನು ಸೃಷ್ಟಿಸಿತು. ನವ್ಯ ಸಾಹಿತ್ಯಕ್ಕೆ ಸಮಾಜವಾದಿ ಆಯಾಮ ಬಂದದ್ದು ಆಗ. ಸಮಾಜವಾದಿ ಚಳವಳಿಯ ಜೊತೆಜೊತೆಗೆ ಬೆಸಗರಹಳ್ಳಿ ರಾಮಣ್ಣ, ಶೂದ್ರ ಶ್ರೀನಿವಾಸ್, ಚಂಪಾರಂಥ ಲೇಖಕರೂ ರೂಪುಗೊಳ್ಳುತ್ತಿದ್ದರು. ತೇಜಸ್ವಿ, ನಂಜುಂಡಸ್ವಾಮಿ ರೂಪಿಸಿದ 'ಲೋಹಿಯಾ ರೆಡ್ ಬುಕ್', ಕೆ.ವಿ. ಸುಬ್ಬಣ್ಣ ಅನುವಾದಿಸಿದ ಲೋಹಿಯಾರ 'ರಾಜಕೀಯದ ಮಧ್ಯೆ ಬಿಡುವು' ಕನ್ನಡ ಸಂಸ್ಕೃತಿಯ ಚಿಂತನೆಯ ದಿಕ್ಕನ್ನೇ ಪಲ್ಲಟಗೊಳಿಸಿದವು. ಸಾಹಿತ್ಯ, ವಿಮರ್ಶೆ,